

ಶೀತಲ್ ದೇವಿ




ನಾಗಪುರದ ದಿವ್ಯಾ ದೇಶಮುಖ ಅವರು ಫಿಡೆ ಚೆಸ್ ಮಹಿಳಾ ವಿಶ್ವ ಚಾಂಪಿಯನ್ ಆಗಿದ್ದು ಕೂಡ ದೇಶವೇ ಹಿರಿಹಿರಿ ಹಿಗ್ಗಿತು. ಮಂಗಳೂರಿನ ಇಶಾ ಶರ್ಮಾ ಅವರು ಗ್ರ್ಯಾಂಡ್‌ಮಾಸ್ಟರ್ ಆದರು. ಕರ್ನಾಟಕದ ಮೊದಲ ಗ್ರ್ಯಾಂಡ್‌ಮಾಸ್ಟರ್ ಎಂಬ ಹೆಗ್ಗಳಿಕೆ ಅವರದ್ದು.

ಎರಡೂ ಕೈಗಳು ಇಲ್ಲದಿದ್ದರೆ ಏನಂತೆ; ಕಾಲುಗಳು ಬಲವಾಗಿವೆಯಲ್ಲ ಸಾಕು ಎಂಬ ಆತ್ಮವಿಶ್ವಾಸದ ಹುಡುಗಿ ಶೀತಲ್ ದೇವಿ ಸಾಧನೆಗೆ ಜಗವೇ ಮೆಚ್ಚಿ ಕೊಂಡಾಡಿತು. ಪ್ಯಾರಾ ಆರ್ಚರಿಯಲ್ಲಿ ಈ ಹುಡುಗಿ ವಿಶ್ವ ಕಿರೀಟ ಧರಿಸಿದರು.

ವಿಶ್ವಕಪ್ ಬಾಕ್ಸಿಂಗ್‌ನಲ್ಲಿ ಭಾರತದ ಏಳು ಮಹಿಳಾ ಬಾಕ್ಸರ್‌ಗಳು ಚಿನ್ನದ ಪದಕ ಸಾಧನೆ ಮಾಡಿದರು. ಕಬಡ್ಡಿ ವಿಶ್ವಕಪ್ ಕೂಡ ಈ ಬಾರಿ ಭಾರತದ ಮಹಿಳೆಯರ ಪಾಲಾಯಿತು.

## ನೀರಜ್ 90 ಮೀಟರ್ ಸಾಧನೆ

ಎರಡು ಒಲಿಂಪಿಕ್ ಕೂಟಗಳಲ್ಲಿ ಪದಕ ಜಯಿಸಿರುವ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಈ ವರ್ಷ 90 ಮೀಟರ್ ದೂರ ಎಸೆತದ ಸಾಧನೆಯನ್ನು ಮಾಡಿದರು. ಡೈಮಂಡ್ ಲೀಗ್‌ನಲ್ಲಿ ಪದಕ ಸಾಧನೆ ಮಾಡಿದರು. ಆದರೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕ ಉಳಿಸಿಕೊಳ್ಳಲಿಲ್ಲ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ನೀರಜ್ ಚೋಪ್ರಾ ಕ್ಲಾಸಿಕ್ ಜಾವೆಲಿನ್ ಥ್ರೋ ಕಾರ್ಯಕ್ರಮವು ರಾಜ್ಯದ ಕ್ರೀಡಾ ಇತಿಹಾಸದಲ್ಲಿ ಹೊಸ ಅಧ್ಯಾಯವಾಗಿ ಸೇರ್ಪಡೆಯಾಯಿತು. ದೇಶ, ವಿದೇಶಗಳ ಖ್ಯಾತನಾಮ ಜಾವೆಲಿನ್ ಅಥ್ಲೀಟ್‌ಗಳು ಭಾಗವಹಿಸಿದ್ದರು.

ಭಾರತ ಪುರುಷರ ಕೊಕ್ಕೊ ತಂಡವೂ ವಿಶ್ವ ಚಾಂಪಿಯನ್ ಆಯಿತು.

ಜಾರ್ಖಂಡ್‌ನ ಅಥ್ಲೀಟ್ ಅನಿಮೇಶ್ ಕುಜೂರ್ ಅವರು 100 ಮೀಟರ್ ಓಟದಲ್ಲಿ ದಾಖಲೆ ಬರೆದರು. ಆ ಮೂಲಕ ದೇಶದ ಶರವೇಗದ ಓಟಗಾರನಾಗಿ ಹೊರಹೊಮ್ಮಿದರು. ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಸುಮಿತ್ ಅಂಟಿಲ್, ಶೂಟಿಂಗ್‌ನಲ್ಲಿ ಸಮರ್ಥ್ ರಾಣಾ ಅವರ ಸಾಧನೆಗಳು ಬಹುಕಾಲ ನೆನಪಿನಲ್ಲುಳಿಯಲಿವೆ.

ಈ ನಡುವೆ 2030ರಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟ ಆತಿಥ್ಯದ ಅವಕಾಶ ಭಾರತಕ್ಕೆ ಲಭಿಸಿದೆ. ಕೂಟವು ಅಹಮದಾಬಾದ್‌ನಲ್ಲಿ ನಡೆಯಲಿದೆ.

ಆದರೆ ದೇಶದ ಫುಟ್‌ಬಾಲ್ ಕ್ರೀಡೆಯ ಜಂಜಾಟಗಳು ಮಾತ್ರ ಇನ್ನೂ ಪರಿಹಾರವಾಗಿಲ್ಲ. ಫಿಫಾ ರ್‍ಯಾಂಕಿಂಗ್‌ನಲ್ಲಿ ಮತ್ತಷ್ಟು ಕುಸಿತವಾಗಿರುವ ಭಾರತ ತಂಡಕ್ಕೆ ಈ

ನೀರಜ್ ಚೋಪ್ರಾ






ಪ್ಯಾರಾ ಜಾವೆಲಿನ್ ಥ್ರೋ ಪಟು
ಸುಮಿತ್ ಅಂಟಿಲ್